17.	ಹೋಗಾವಿ	15
18.	ಅಲದಗೆರೆ	27
19.	ಸುತಕೋಟಿ	20
20.	ಶಿರಗುಂಪಿ	30
21.	ಅಣಜಿ	25
22.	ಅರಳಿಕಟ್ಟಿ	5
23.	ಮಕರಿ	18
	ಒಟ್ಟು	500

ವಿಷಯ:- ಬೆಂಗಳೂರಿನ ಸರ್ಕಾರಿ ದಂತ ಕಾಲೇಜಿಗೆ ವಿದ್ಯುತ್ ಜನರೇಟರ್.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 116 (132)

ಶ್ರೀ ಯು.ಬಿ.ಬಣಕಾರ (ಹಿರೇಕೆರೂರು):- ಮಾನ್ಯ ವೈದ್ಯಕೀಯ ಶಿಕ್ಷಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

1) ಬೆಂಗಳೂರಿನಲ್ಲಿ ಸರ್ಕಾರಿ ದಂತ ಕಾಲೇಜಿನಲ್ಲಿ ವಿದ್ಯುತ್ ಜನರೇಟರ್ ಸೌಲಭ್ಯವಿಲ್ಲದೆ ರೋಗಿಗಳಿಗೆ ತೊಂದರೆ ಆಗುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

2) ಹಾಗಿದ್ದಲ್ಲಿ ವಿದ್ಯುತ್ ಜನರೇಟರ್ ಅಳವಡಿಸಲು ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?

ಡಾ|| ಎಂ.ಶಂಕರನಾಯಕ್ (ವೈದ್ಯಕೀಯ ಶಿಕ್ಷಣ ಸಚಿವರು):-

1) ಹೌದು

2) ಈಗಾಗಲೇ 5 ಕೆವಿಎ ಸಾಮರ್ಥ್ಯವುಳ್ಳ ಜನರೇಟರನ್ನು ಓರಲ್ ಸರ್ಜರೀ ವಿಭಾಗಕ್ಕೆ ಅಳವಡಿಸಲಾಗಿದ್ದು, ಇದು ಚಾಲನೆಯಲ್ಲಿರುತ್ತದೆ ಹಾಗೂ ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಅಳವಡಿಸಲಾಗಿರುವ ಅಧಿಕ ಶಕ್ತಿಯ ಜನರೇಟರ್ ಸೌಲಭ್ಯವನ್ನು ಈ ಮಹಾವಿದ್ಯಾಲಯಕ್ಕೆ ಅಳವಡಿಸಲು ಲೋಕೋಪಯೋಗಿ ಇಲಾಖೆಯವರು ಕ್ರಮ ಕೈಗೊಳ್ಳುತ್ತಿದ್ದಾರೆ.

ವಿಷಯ:- ಹಿರೇಕೆರೂರ ತಾಲ್ಲೂಕಿನ ಮಿಕದ ಕಾಟ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂ : 117 (152)

ಶ್ರೀ ಯು.ಬಿ.ಬಣಕಾರ (ಹಿರೇಕೆರೂರು):- ಮಾನ್ಯ ಅರಣ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಹಿರೇಕೆರೂರ ತಾಲ್ಲಕು ಒಕ್ಕಬೂದಿ ಹಾಳ ಗ್ರಾಮದ ಸುತ್ತಮುತ್ತಲಿನ ಗ್ರಾಮಗಳಿಗೆ ಮಿಕದ ಕಾಟ ಬಹಳ ಆಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ;

ಆ) ದಿನಾಂಕ: 3-6-96ರಂದು ಬಸವಾಗಳವು, ಹಳ್ಳೇರ್, ಕಂಬಸವು, ಹೀರೆಮಠ ಹಾಗೂ ಇತರೆ 3 ಜನರು ಮಿಕದಿಂದ ಗಾಯಗೊಂಡಿದ್ದು ಅವರಿಗೆ ಇನ್ನುವರೆಗೆ ಯಾವುದೇ ಪರಿಹಾರ ಕೊಡದಿರುವುದು ನಿಜವೆ.

ಇ) ಈಗಲಾದರೂ ಪರಿಹಾರ ಕೊಡಲು ಹಾಗೂ ಮಿಕದ ಹಾವಳಿ ತಡೆಗೊಳ್ಳಲು ಕ್ರಮ ತೆಗೆದುಕೊಳ್ಳಲಾಗುವುದೇ?

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಅರಣ್ಯ ಸಚಿವರು):-

ಅ) ಬಂದಿದೆ

ಆ) ಮಿಕದಿಂದ ಗಾಯಗೊಂಡಿರುವುದು ನಿಜ. ಆದರೆ ಗಾಯಾಳುಗಳು ಯಾವುದೇ ದಾಖಲಾತಿಗಳನ್ನು ಸಲ್ಲಿಸಿರದ ಕಾರಣ ಯಾರಿಗೂ ಪರಿಹಾರಧನ ನೀಡಿರುವುದಿಲ್ಲ.

ಇ) ಕಾಡಿನೊಳಕ್ಕೆ ಓಡಿಸಲು ಕ್ರಮಕೈಗೊಳ್ಳಲಾಗಿದೆ.

ವಿಷಯ: ಅರಣ್ಯ ಜಮೀನಿನ ಅಕ್ರಮ ಸಾಗುವಳಿ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 118 (134)

ಶ್ರೀ ಯು.ಬಿ.ಬಣಕಾರ್ (ಹಿರೇಕೆರೂರು):- ಮಾನ್ಯ ಅರಣ್ಯ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ, ದಯವಿಟ್ಟು ಉತ್ತರಿಸುವರೇ:

ಅ) ಅರಣ್ಯ ಜಮಾನನ್ನು ಅಕ್ರಮವಾಗಿ ಸಾಗುವಳಿ ಮಾಡಿದ ಸಾಗುವಳಿದಾರರು ಸಕ್ರಮಗೊಳಿಸಲು ಸಲ್ಲಿಸಿದ ಅರ್ಜಿಗಳನ್ನು ಪರಿಶೀಲಿಸಿ ಸಕ್ರಗೊಳಿಸಲು ಸರ್ಕಾರದವರು ಕ್ರಮ ಕೈಗೊಳ್ಳುವರೆ.

ಆ) ಅಕ್ರಮವಾಗಿ ಸಾಗುವಳಿ ಮಾಡಿದ ಜಿಲ್ಲಾವಾರು ಜಮಾನಿನ ವಿಸ್ತೀರ್ಣವೆಷ್ಟು?

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಅರಣ್ಯ ಸಚಿವರು):-

ಅ) ಹೌದು. ದಿನಾಂಕ : 27-04-1978ಕ್ಕೂ ಮೊದಲು ಅರಣ್ಯ ಜಮಾನನ್ನು ಅತಿಕ್ರಮಣ ಮಾಡಿದವರಿಗೆ ಸದರೀ ಜಮಾನನ್ನು ಸಕ್ರಮಗೊಳಿಸಲು ಕ್ರಮ ತೆಗೆದುಕೊಳ್ಳಲಾಗುತ್ತಿದೆ.

ಆ) ಸಕ್ರಮಗೊಳಿಸಬೇಕಾಗಿರುವ ಜಿಲ್ಲಾವಾರು ವಿಸ್ತೀರ್ಣದ ವಿವರಗಳನ್ನು ಅನುಬಂಧದಲ್ಲಿ ಕೊಡಲಾಗಿದೆ.